# ಮಾನ್ಸೂನ್ ಮ್ಯಾಜಿಕ್!

■ ಚಿತ್ರ ಬರಹ:
ಕೃಷ್ಣಪ್ರಸಾದ್ ಶಿಮ್ಲಡ್ಕ



ಕಾರಿನ ಗಾಜಿನ ಮೂಲಕ ಕಂಡ ಮಳೆಗಾಲದ ದೃಶ್ಯ.

**ಸೂ**ರ್ಯನ ತಾಪ ಧಗಧಗಿಸುವ ಹೊತ್ತಲ್ಲಿ ತಂಪು ತಂಪು ಮಳೆಗಾಲವನ್ನು ನೆನಪಿಸಿಕೊಂಡರೆ ಹೇಗೆ? ಆಹಾ.. ಅದರಲ್ಲೂ ಕ್ಯಾಮೆರಾ ಕಣ್ಣಿಗೆ ಸೆರೆ ಸಿಗುವ ಮಾನ್ಸೂನ್ ಮ್ಯಾಜಿಕ್ ನಿಜಕ್ಕೂ ಅದ್ಭುತ.

ಮೇ ತಿಂಗಳ ಬೆನ್ನಲ್ಲೆ ಆಕಾಶದಲ್ಲಿ ಮೋಡ ದಟ್ಟೈಸತೊಡಗುತ್ತದೆ. ಜೂನ್ ಮೊದಲ ವಾರದಲ್ಲೊಂದು ಭರ್ಜರಿ ಮಳೆ ಹೊಡೆದರೆ, 'ಅಬ್ಬಾ ಈ ಸಲದ ಮಳೆಗಾಲ ಕರೆಕ್ಟಾಗಿ ಶುರುವಾಗಿದೆ' ಎಂದು ಎಲ್ಲರೂ ಸಂತೋಷ ಪಡುವವರೇ. ಕರಾವಳಿ, ಮಲೆನಾಡಿನಲ್ಲಂತೂ ಅದು 1–2 ವಾರದ ಮಳೆ. ಬಿಸಿಲಲ್ಲಿ ಒಣಗಿದ ಭೂರಮೆಯು ಮಳೆ ನೀರಲ್ಲಿ ತೊಯ್ದು ಪಚ್ಚೆ ಹಸಿರಿನ ತೋಟ ಕಂಗೊಳಿಸುವುದನ್ನು ನೋಡಲು ಎರಡು ಕಣ್ಣುಗಳು ಸಾಲದು. ಭರ್ಜರಿ ಮಳೆಯಲ್ಲಿ ನಗರದ ರಸ್ತೆಯಲ್ಲಿ ಕಾರೊಳಗೆ ಕುಳಿತು ಹೊರಟರೆ ಕನ್ನಡಿಯಾಚೆಗೂ ಹೊಸದೊಂದು ಮಳೆಯ ಲೋಕ. ●

ಮಳೆಯ ಹಾಡನ್ನು ಆಲಿಸುತ್ತ, ಕೊಡೆ ಹಿಡಿದು ನಡಿಗೆ.

